ಪುತ್ತೂರು ಮತ್ತು ಉಪ್ಪಿನಂಗಡಿ ಹೋಬಳಿ ವ್ಯಾಪ್ತಿಯಲ್ಲಿ ಅಕ್ರಮ ಸಕ್ರಮ ಅರ್ಜಿ ವಿಲೇವಾರಿ

4354(4967) ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಪುತ್ತೂರು ಮತ್ತು ಉಪ್ಪಿನಂಗಡಿ ಹೋಬಳಿ ವ್ಯಾಪ್ತಿಯಲ್ಲಿ ಅಕ್ರಮ ಸಕ್ರಮ ಕಾಯಿದೆಯನ್ವಯ ಮಂಜೂರಾತಿ ನೀಡಿ ಸಾಗುವಳಿ ಚೀಟು ನೀಡಲು ಕನಿಷ್ಟ 1 ತಿಂಗಳಿಂದಾರಂಭಿಸಿ ಬಾಕಿ ಇರುವ ಅರ್ಜಿಗಳು ಎಷ್ಟು ;

ಆ) ಮಂಜೂರಾತಿ ನೀಡಿದ ನಂತರ ಸಾಗುವಳಿ ಚೀಟು ನೀಡಲು ಸರ್ಕಾರವು ಕಾಯಿದೆಯಂತೆ ನಿಗದಿಪಡಿಸಿರುವ ಅವಧಿ ಎಷ್ಟು :

ಇ) ತಹಶೀಲ್ದಾರರ ಕಛೇರಿಯಿಂದ ಇಷ್ಟು ಅವಧಿಯ ವಿಳಂಬವಾಗಲು ಕಾರಣವೇನೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಈ) ಸಾಗುವಳಿ ಚೀಟು ನೀಡಲು ವಿಳಂಬ ಮಾಡುವ ತಹಶೀಲ್ದಾರರ ಮೇಲೆ ಸರ್ಕಾರವು ಏನು ಕ್ರಮ ಕೈಗೊಂಡಿದೆ : ಕೈಗೊಂಡಿಲ್ಲದಿದ್ದರೆ, ಕಾರಣವೇನು ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ನಮೂನೆ – 50 ನಮೂನೆ – 53

223 940

ಆ) ಕಾಯ್ದೆಯಲ್ಲಿ ಸಾಗುವಳಿ ಚಿಟಿ ನೀಡಲು ಅವಧಿ ನಿಗಧಿ ಪಡಿಸಿಲ್ಲ.

ಇ) ಕೆಲವು ಪ್ರಕರಣಗಳಲ್ಲಿ ಮಂಜೂರಿದಾರರು ಸ್ಥಳ ಮೌಲ್ಯ ಪಾವತಿಸಿರುವುದಿಲ್ಲ. ಹಾಗೂ ಇನ್ನು ಕೆಲವು ಪ್ರಕರಣಗಳಲ್ಲಿ ಅರಣ್ಯ ಇಲಾಖೆಯ ಅಭಿಪ್ರಾಯ ಕೋರಲಾಗಿರುವ ಕಾರಣಗಳಿಂದಾಗಿ ಸಾಗುವಳಿ ಚೀಟಿ ನೀಡಲು ವಿಳಂಬವಾಗಿದೆ. ಆದಕಾರಣ ತಹಶೀಲ್ದಾರರ ವಿರುದ್ಧ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) -- " --

ಪುತ್ತೂರು ಹಾಗೂ ಉಪ್ಪಿನಂಗಡಿ ಹೋಬಳಿ ವ್ಯಾಪ್ತಿಯಲ್ಲಿ ಅಕ್ರಮ ಸಕ್ರಮ ಸಾಗುವಳಿ ಚೀಟಿ ವಿತರಣೆ

4355(4968) ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಪುತ್ತೂರು ಮತ್ತು ಉಪ್ಪಿನಂಗಡಿ ಹೋಬಳಿ ವ್ಯಾಪ್ತಿಯಲ್ಲಿ ಅಕ್ರಮ – ಸಕ್ರಮ ಕಾಯಿದೆಯಡಿಯಲ್ಲಿ ತೀರ್ಮಾನಕ್ಕೆ ಬಾಕಿ ಇರುವ ಅರ್ಜಿಗಳು ಎಷ್ಟು :

ಆ) ಇವುಗಳಲ್ಲಿ ರಕ್ಷಿತ ಅರಣ್ಯ ವ್ಯಾಪ್ತಿಗೆ ಸೇರಿರುವ ಜಮೀನನ್ನು ಅಕ್ರಮ – ಸಕ್ರಮ ಕಾಯಿದೆಯಡಿ ಮಂಜೂರಾತಿಗೆ ಸಲ್ಲಿಸಲಾಗಿದೆಯೆಂದು ಪರಿಗಣಿಸಲಾಗಿರುವ ಅರ್ಜಿಗಳು ಎಷ್ಟು ;

ಇ) ಸಮಿತಿಯು ತೀರ್ಮಾನ ನೀಡಿ ವಿಲೇವಾರಿ ಮಾಡಿರುವ ಅರ್ಜಿಗಳು ಎಷ್ಟು ;

ಈ) ಸಮಿತಿಯು ತೀರ್ಮಾನಿಸಿ ವಿಲೇವಾರಿ ಮಾಡಿರುವ ಅರ್ಜಿಗಳಲ್ಲಿ ಎಷ್ಟು ಅರ್ಜಿದಾರರಿಗೆ ಸಾಗುವಳಿ ಚೀಟು ನೀಡಲಾಗಿದೆ ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ)	ನಮೂನೆ – 50	ನಮೂನೆ – 53
	1,636	9,849
ಆ)	ನಮೂನೆ – 50	ನಮೂನೆ – 53
	200	227
ಇ)	ನಮೂನೆ – 50	ನಮೂನೆ – 53
	23,672	4,483
ಈ)	ನಮೂನೆ – 50	ನಮೂನೆ – 53
	16,525	2,983

ಎಲ್.ಓ.ಸಿ. ನೀಡಿಕೆಯಲ್ಲಿ ಅವ್ಯವಹಾರ

4356(4969) ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳಿಗೆ ಸಾಲ ಪ್ರಮಾಣ ಪತ್ರ (ಎಲ್.ಓ.ಸಿ.) ನೀಡಿಕೆಯಲ್ಲಿ ಕೋಟ್ಯಾಂತರ ರೂಪಾಯಿ ದುರುಪಯೋಗವಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಈ ಅವ್ಯವಹಾರದಲ್ಲಿ ಪಾಲ್ಗೊಂಡಿರುವ ಅಧಿಕಾರಿಗಳು, ಸಿಬ್ಬಂದಿಗಳು ಯಾರು; ಮತ್ತು ಅವರ ಮೇಲೆ ಎನು ಕ್ರಮ ಕೈಗೊಳ್ಳಲಾಗಿದೆ ;

ಇ) ಎಷ್ಟು ಮೊತ್ತದ ಅವ್ಯವಹಾರ ಪತ್ತೆ ಮಾಡಲಾಗಿದೆ ; ಮತ್ತು ಈ ಸಂಬಂಧ ತಪ್ಪಿತಸ್ಥ ಅಧಿಕಾರಿ / ಸಿಬ್ಬಂದಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲಾಗಿದೆಯೇ ; ಮೊಕದ್ದಮೆ ದಾಖಲು ಮಾಡದಿದ್ದಲ್ಲಿ ಕಾರಣವೇನು ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ರಾಷ್ಟ್ರೀಯ ಹೆದ್ದಾರಿ ವಲಯದ ಕಾಮಗಾರಿಗಳಿಗೆ ಎಲ್.ಓ.ಸಿ. ನೀಡಿಕೆಯಲ್ಲಿ ಯಾವುದೇ ಹಣ ದುರುಪಯೋಗವಾಗಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಪುತ್ತೂರು ವಾರ್ತಾ ಭವನಕ್ಕೆ ಅಗತ್ಯ ಸೌಲಭ್ಯಗಳು

4357(4970) ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) : ಮಾನ್ಯ ವಾರ್ತಾ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಪುತ್ತೂರು ವಾರ್ತಾ ಭವನವನ್ನು ಸ್ಥಳಾಂತರಿಸುವುದಿಲ್ಲವೆಂದು ಸರ್ಕಾರ ಸದನದಲ್ಲಿ ಭರವಸೆ ನೀಡಿದ್ದು, ಈಗ ಪುತ್ತೂರು ವಾರ್ತಾ ಮತ್ತು ಪ್ರಚಾರಾಧಿಕಾರಿಯವರನ್ನು ಉಡುಪಿ ಜಿಲ್ಲೆಗೆ ವರ್ಗಾವಣೆ ಮಾಡಿರುವುದರ ಔಚಿತ್ಯವೇನು ;

ಆ) ವಾರ್ತಾ ಭವನಕ್ಕೆ ಅವಶ್ಯ ಸಿಬ್ಬಂದಿ ಹಾಗೂ ದೂರವಾಣಿ ಸಂಪರ್ಕವನ್ನು ಒದಗಿಸುವಂತೆ ಈ ಹಿಂದೆ ಅನೇಕ ಬಾರಿ ಪುತ್ತೂರು ಶಾಸಕರು ಸರ್ಕಾರಕ್ಕೆ ಮಾಡಿರುವ ಮನವಿಗೆ ಸರ್ಕಾರ ಸ್ಪಂದಿಸಿದೆಯೇ ; ಇಲ್ಲವಾದಲ್ಲಿ ಕಾರಣವೇನು ;